146 ನೇ ಅಧಿವೇಶನ
ನಿ-72 ಕ್ರ-198

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ಇವರು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಹೇಳಿಕೆ.**

**ಪ್ರಶ್ನೆ:-**

ಬೆಂಗಳೂರು ನಗರದ ಕತ್ರಿಗುಪ್ಪೆ ಗ್ರಾಮದ ಸರ್ವೆ ನಂ.15 ರಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಮೀಸಲಿಟ್ಟಿರುವ ತುಂಬಾ ಬೆಲೆಬಾಳುವ ನಿವೇಶನವನ್ನು ಹೈಕೋರ್ಟ್ ಆದೇಶವಿದ್ದರೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಶಕ್ಕೆ ಪಡೆಯದೆ ಈ ಭಾಗದ ಸಾರ್ವಜನಿಕ ಉಪಯೋಗಕ್ಕೆ ಅಗತ್ಯವಾದ ಆಸ್ಪತ್ರೆ / ಬಸ್ ನಿಲ್ದಾಣ / ಶಾಲೆ ಇನ್ನು ಮುಂತಾದವುಗಳಿಗೆ ನಿವೇಶನದ ಕೊರತೆ ಕಂಡುಬಂದಿರುವ ಬಗ್ಗೆ.

**ಉತ್ತರ :-**

ಬೆಂಗಳೂರು ನಗರದ ಕತ್ರಿಗುಪ್ಪೆ ಗ್ರಾಮದ ಸ.ನಂ.15 ರಲ್ಲಿ ಈ ಕೆಳಕಂಡ ಮೂರು ಸಿ.ಎ. ನಿವೇಶನಗಳನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ:-

| ಕ್ರ ಸಂ | ಸಿ.ಎ ನಿವೇಶನಗಳ ವಿವರಗಳು | ಹಂಚಿಕೆ ವಿವರಗಳು |
|---|---|---|
| 1 | ಸಿ.ಎ ನಿವೇಶನ | ಗ್ಯಾಸ್ ಗೋಡನ್‌ಗೆ ಹಂಚಿಕೆಯಾಗಿರುತ್ತದೆ. |
| 2 | ಸಿ.ಎ ನಿವೇಶನ | ಸದರಿ ನಿವೇಶನವು ಹಂಚಿಕೆಯಾಗದೆ ಖಾಲಿ ಇರುತ್ತದೆ. ಈ ನಿವೇಶನದಲ್ಲಿ ತುಂಬ ಹಳೆ ಗುಜರಿ ವಾಹನಗಳನ್ನು ನಿಲ್ಲಿಸಿದ್ದು, ಅನುಪಯುಕ್ತ ಸೆಂಟ್ರಿಂಗ್ ಸಾಮಾನುಗಳನ್ನು ಶೇಖರಿಸಲಾಗಿರುತ್ತದೆ. |
| 3 | ಸಿ.ಎ ನಿವೇಶನ | ವಿದ್ಯಾಪೀಠ ಸಂಸ್ಥೆಗೆ ಲೀಸ್ ಆಧಾರ ಮೇಲೆ ಹಂಚಿಕೆಯಾಗಿರುತ್ತದೆ. |

ಮೇಲ್ಕಂಡ ಕ್ರಮ ಸಂಖ್ಯೆ (02) ರಲ್ಲಿನ ಸಿ.ಎ. ನಿವೇಶನ ಸರ್ವೆ ನಂ. 15/1 ರ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP No.10335/2005 ದಾವೆಯನ್ನು ವಿದ್ಯಾಪೀಠ ಬಡಾವಣೆಯ ನಾಗರಿಕ ಹಿತರಕ್ಷಣಾ ಸಮಿತಿಯು ದಾಖಲಿಸಿದ್ದು, ದಿನಾಂಕ:05.07.2005 ರ ತೀರ್ಪಿನಲ್ಲಿ ದಾವೆಯು ಹಿಂಪಡೆದಿರುವುದರಿಂದ ಸದರಿ ದಾವೆಯನ್ನು ಮಾನ್ಯ ಉಚ್ಚನ್ಯಾಯಾಲಯವು ವಜಾಗೊಳಿಸಿ, ಆದೇಶಿಸಿರುತ್ತದೆ.

ಶ್ರೀ.ಇ.ಶ್ರೀನಿವಾಸ್ ಮತ್ತು ಶ್ರೀ.ಇ.ಗಣೇಶ್ ರವರು ಮಾನ್ಯ ಉಚ್ಚನ್ಯಾಯಾಲಯದಲ್ಲಿ WP No.12310/2007 ರಂತೆ ದಾವೆಯನ್ನು ದಾಖಲಿಸಿದ್ದು, ದಿನಾಂಕ:04.03.2007 ರ ತೀರ್ಪಿನಲ್ಲಿ ವಾದಿಯವರಿಗೆ 17 ಗುಂಟೆ ಜಮೀನನ್ನು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಸಾಬೀತುಪಡಿಸಲು ಸೂಚಿಸಿ ದಾವೆಯನ್ನು ಮಾನ್ಯ ಉಚ್ಚನ್ಯಾಯಾಲಯವು ವಜಾಗೊಳಿಸಿದೆ.

ಮುಂದುವರಿದು, ಸದರಿ ಸಿ.ಎ ನಿವೇಶನದ ಮೇಲೆ ಮಾನ್ಯ ನ್ಯಾಯಾಲಯದ ದಾವೆ ಸಂಖ್ಯೆ.OS No.1738/2009 ರಲ್ಲಿ ದಾಖಲಾಗಿದ್ದು, ದಿನಾಂಕ:03.01.2015 ರ ತೀರ್ಪಿನಲ್ಲಿ ದಾವೆಯನ್ನು ವಜಾಗೊಳಿಸಲಾಗಿರುತ್ತದೆ. ಅದರಂತೆ, ಅಂದಿನ ಬಿಡಿಎ ಆಯುಕ್ತರ ಆದೇಶ ಸಂಖ್ಯೆ.3444, ದಿನಾಂಕ:29.07.2015 ರಂತೆ ಅಭಿಯಂತರರ ಅಧಿಕಾರಿ-1 ರವರು ತೆರವು ಕಾರ್ಯಾಚರಣೆಗೆ ಆದೇಶ ನೀಡಿದ್ದು, ದಿನಾಂಕ:10.09.2015 ರಂದು ಕಾರ್ಯಾಚರಣೆಯನ್ನು ನಿಗಧಿಪಡಿಸಿ, ಪ್ರಾಧಿಕಾರದ ವಿಶೇಷ ಜಾಗೃತ ದಳದ ಪೋಲಿಸ್ ಅಧೀಕ್ಷಕರಿಗೆ ಸೂಕ್ತ ರಕ್ಷಣೆ ವ್ಯವಸ್ಥೆ ನೀಡಲು ಕೋರಲಾಗಿತ್ತು. ಆದರೆ ಸದರಿ ಸ್ಥಳದ ಅನಧಿಕೃತದಾರರಾದ ಶ್ರೀ.ಇ.ಗಣೇಶ್ ರವರು ದಾವೆ ಸಂಖ್ಯೆ. RFA No.173/2015 ರಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಾತ್ಕಾಲಿಕ ತಡೆಯಾಜ್ಞೆ ಆದೇಶ ಪಡೆದಿದ್ದು, "**Ad-interim injunction as prayed for, till the next date**" ಎಂದು ದಿನಾಂಕ:10.04.2015 ರಂದು ನಿರ್ದೇಶನ ನೀಡಲಾಗಿತ್ತು. ಆದಕಾರಣ ತೆರವು ಕಾರ್ಯಚರಣೆ ಸಂಬಂಧ ಯಾವುದೇ ಕ್ರಮ ಕೈಗೊಳ್ಳಲು ಬರುವುದಿಲ್ಲವೆಂದು ಪ್ರಾಧಿಕಾರದ ಆರಕ್ಷಕ ನಿರೀಕ್ಷಕರು ತಿಳಿಸಿದ ಕಾರಣ ತೆರವು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು. ದಾವೆಯು ಇತ್ಯರ್ಥವಾದ ನಂತರ ಸದರಿ ಸಿ.ಎ ನಿವೇಶನವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಶಕ್ಕೆ ಪಡೆದು ಹಂಚಿಕೆ ಮಾಡಲಾಗುವುದು.

**ಸಂಖ್ಯೆ: ನಅಇ 126 ಬೆಂಭೂಸ್ವಾ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ